ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

(ಅ) ಕೊಳ್ಳೇಗಾಲ ತಾಲ್ಲೂಕಿನಲ್ಲಿ, ದಿನಾಂಕ ೩೧-೩-೧೯೯೦ ರಲ್ಲಿರುವಂತೆ ೧೦೮ ಹರಿಜನ ಬಸ್ತಿಗಳು ಮತ್ತು ೭೩ ಗಿರಿಜನ ಕಾಲೋನಿಗಳು ಇದ್ದವು.

(ಆ) ಈ ತಾಲ್ಲೂಕಿನಲ್ಲಿ ದಿನಾಂಕ ೩೧-೩-೧೯೯೦ ರಲ್ಲಿರುವಂತೆ, ೮೧ ಹರಿಜನ ಬಸ್ತಿಗಳು ಮತ್ತು ೩೭ ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಣಗೊಳಿಸಲಾಗಿತ್ತು,

(ಇ) ೧೯೯೦-೯೧ನೇ ಸಾಲಿನಲ್ಲಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ, ೫೫ ಹರಿಜನ ಬಸ್ತಿಗಳನ್ನು ಮತ್ತು ೪ ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಿಸಲು ಗುರಿ ಹೊಂದಿದೆ:

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದರೆ ೮೧ ಹರಿಜನ ಬಸ್ತಿಗಳು ಮತ್ತು ೩೭ ಗಿರಿಜನ ಕಾಲೋನಿಗಳನ್ನು ಇನ್ನು ವಿದ್ಯುದೀಕರಣ ಮಾಡಬೇಕೆಂದು ಹೇಳಿದ್ದಾರೆ. ಆದರೆ ೧೯೯೦-೯೧ನೇ ಸಾಲಿನಲ್ಲಿ ಕೇವಲ ೫೫ ಹರಿಜನ ಬಸ್ತಿಗಳನ್ನು ೪ ಗಿರಿಜನ ಕಾಲೋನಿಗಳನ್ನು ವಿದ್ಯುದೀಕರಿಸಲಾಗುವುದೆಂದು ಹೇಳಿದ್ದಾರೆ. ಈ ತರಹ ತಾವು ಮುಂದು ವರಿಯುವುದಾದರೆ ಬಹುಶಃ ಇನ್ನು ೧೦ ವರ್ಷಗಳಾದರೂ ಈ ಬಸ್ತಿಗಳ ವಿದ್ಯುದ್ದೀಕರಣ ಆಗುವುದಿಲ್ಲ ಎಂದು ನಾನು ಹೇಳುತ್ತೇನೆ, ರಾಜ್ಯಪಾಲರ ಭಾಷಣದಲ್ಲಿ ೧೯೮೯-೯೦ ಮತ್ತು ೧೯೯೦-೯೧ರ ಮಾರ್ಚ್ ೩೧ಕ್ಕೆ ರಾಜ್ಯದಲ್ಲಿರತಕ್ಕಂಥ ಎಲ್ಲಾ ಕಂದಾಯ ಗ್ರಾಮಂಗಳಿಗೆ ಮತ್ತು ವಸತಿ ಗ್ರಾಮಗಳಿಗೆ ವಿದ್ಯುದೀಕರಣ ಮಾಡಲಾಗುವುದೆಂದು ಹೇಳಿ ಈಗ ತಮ್ಮ ಉತ್ತರ ನೋಡಿದರೆ ಇನ್ನು ೧೦ ವರ್ಷಗಳಾದರೂ ವಿದ್ಯುದೀಕರಣ ಆಗುವಂತೆ ನಮಗೆ ಕಾಣುತ್ತಿಲ್ಲ. ಇದರ ಅರ್ಥ ಏನು ?

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ ಕೊಳ್ಳೇಗಾಲ ತಾಲ್ಲೂಕಿನಲ್ಲಿ ೧೦೮ ಹರಿಜನ ಬಸ್ತಿಗಳು ೭೩ ಗಿರಿಜನ ಕಾಲೋನಿಗಳು ಇದ್ದವು. ಇದರಲ್ಲಿ ಇದುವರೆಗೆ ೮೧ ಹರಿಜನ ಬಸ್ತಿಗಳನ್ನು ಮತ್ತು ೩೭ ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಣ ಮಾಡಿದ್ದೇವೆ. ಬಹಳ ಮುಖ್ಯವಾದ ಭಾಗ ಎಲ್ಲಾ ಆಗಿದೆ. ಈ ವರ್ಷ ಪುನಃ ೫೫ ಹರಿಜನ ಬಸ್ತಿಗಳನ್ನು ೪ ಗಿರಿಜನ ಕಾಲೋನಿಗಳನ್ನು ಅಂದರೆ ೧೯೯೦-೯೧ರಲ್ಲಿ ಕೊಡಬೇಕೆಂದು ಇದ್ದೇವೆ. ನಂತರ ೧೯೯೧-೯೨ರಲ್ಲಿ ೬ ಹರಿಜನ ಬಸ್ತಿಗಳು ಮತ್ತು ೨ ಗಿರಿಜನ ಕಾಲೊನಿಗಳಿಗೆ ವಿದ್ಯುದೀಕರಣ ಮಾಡಿದ್ದೇವೆ. ಇನ್ನು ಉಳಿದ ಹಳ್ಳಿಗಳು ಮುಂದಿನ ಪಂಚವಾರ್ಷಿಕ ಯೋಜನೆಗಳಲ್ಲಿ ಆಗುತ್ತವೆ.

ಶ್ರೀ ಜಿ. ರಾಜುಗೌಡ.—ತಾವು ರೂರಲ್ ಎಲೆಕ್ಟ್ರಿಫಿಕೇಶನ್ ಮಾಡಲು ಒಂದು ಪಟ್ಟಿ ಮಾಡಿದ್ದೀರಿ. ಆ ಪಟ್ಟಿಪ್ರಕಾರ ಎಲ್ಲಾ ಗ್ರಾಮಗಳು ಸೇರಿವೆಯೇ ೩ ವರ್ಷಗಳಲ್ಲಿ ಮಾಡಬೇಕೆಂದು ಇತ್ತು. ತಾವು ಈ ಕೆಲಸವನ್ನು ತ್ವರಿತಗೊಳಿಸಿ ಆದಷ್ಟು ಬೇಗ ಎಲ್ಲಾ ಗ್ರಾಮಗಳಿಗೂ ವಿದ್ಯುದ್ದೀಕರಣ ಮಾಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಯಾವಾಗ ಈ ಹಳ್ಳಿಗಳಿಗೆ ಪೂರ್ತಿ ವಿದ್ಯುದೀಕರಣ ಮಾಡುತ್ತೀರಿ ?

ಶ್ರೀ ಎಸ್. ಎಂ. ಯಾಹ್ಯಾ.—ನಿಮ್ಮ ಇಚ್ಛೆ ನಮ್ಮ ಇಚ್ಛೆ ಒಂದೇ ಆಗಿದೆ. ಬಹಳ ವೇಗವಾಗಿ ಆಗಬೇಕೆಂದು ಇದೆ.

ಪ್ರಸ್ತುತ ವರ್ಷದಲ್ಲಿನ ಅಬಕಾರಿ ರಾಜಸ್ವ

(೭೨೩) ಶ್ರೀ ಎಂ. ವಿ. ವೆಂಕಟಪ್ಪ (ಮಂಳಬಾಗಿಲು).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ರಾಜ್ಯದಲ್ಲಿ ಈ ವರ್ಷದ ಹರಾಜಿನಲ್ಲಿ ಒಟ್ಟು ಸರ್ಕಾರಕ್ಕೆ ಬಂದ ಆದಾಯವೆಷ್ಟು ? (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

(ಆ) ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷದ ಆದಾಯದಲ್ಲಿ ಹೆಚ್ಚಳವಾಗಿದೆಯೇ ? (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

(ಇ) ರಾಜ್ಯದಲ್ಲಿ ಹಂತ ಹಂತವಾಗಿ ಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತರುವ ಪ್ರಸ್ತಾವನೆ ಇದೆಯೇ ?

ಶ್ರೀ ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಸಚಿವರು).—

(ಅ) ಪಟ್ಟಿಯನ್ನು ಲಗತ್ತಿಸಲಾಗಿದೆ.

(ಆ) ಹೌದು ಪಟ್ಟಿಯನ್ನು ಲಗತ್ತಿಸಿದೆ.

(ಇ) ಇಲ್ಲ.

Consolidated Statement showing the arrack shop rentals

Sl. No.	District	Arrack Rentals for 89-90 (P. M.)	Rentals secured for 90-91 (P. M.)
1	Bangalore (U)	1,80,07,900	6,86,01,000
2	Bangalore (R)	31,18,500	1,49,86,800
3	Bellary	50,30,300	1,52 74,500
4	Belgaum	79,09,800	1,37,12,000
5	Bidar	26,26,200	37,68,400
6	Bijapur	38,06,322	68,90,000
7	Chickmagalur	40,94,600	88,80,400
8	Chitradurga	30,25,000	1,22,74,600
9	D. Kannada	1,95,41,000	3,02,91,000
10	Dharwad	51,33,000	1,24,88,100
11	Gulbarga	50,93,644	1,39,47,500
12	Hassan	32,07,925	1,43,41,000
13	Kodagu	21,05,700	46,88,000
14	Kolar	35,41,600	1,33,01,600
15	Mandya	38,63,500	1,36,78,600
16	Mysore	94,17,300	2,21,18,300
17	Raichur	34,56,800	1,39,15,900
18	Shimoga	62,53,300	1,48,04,700
19	Tumkur	30,56,000	1,29,93,900
20	Uttara Kannada	31,05,500	58,88,000
	Total	11,53,93,891	31,68,11,300

Increase (per month) Rs. 20,14,50,409
Increase (per year) Rs. 241,74,04,908
Percentage of Increase : 174.60%

secured for the year 1990–91 compared to the rentals of 1989–90.

+	Arrack Rentals for 89–90 (P.A.)	Rentals Secured for 90–91 (P.M.)	+
5,05,93,100	21.60,94,800	82,32,12,000	60,71,17,200
1,18,68,300	3.74,22,000	17,98,41,600	14,24,19,600
1,02,44,200	6,03,63,600	18,32,94,000	12.29,30,400
58,02,200	9,49,17,600	16,45,44,000	6,96,26,400
11,42,200	3,15,14,400	4,52,20,800	1,37,06,400
30,83,678	4,56,75,865	8,26,80,000	3,70,04,136
47,85,800	4,91,35,200	10,65,64,800	5,74,29,600
92,49,600	3.63,00,000	14,72,95,200	11,09 95 200
1,07,50 000	23,44,92,000	36,34,92,000	12,90,00,000
73,55,100	6,15,96,000	14,98,57,200	8,82,61,200
88,53,856	6,11,23,728	16,73,70,000	10,62,46,272
1,11,33,075	3,84,95,100	17,20,92,000	13,35,96,900
25,82,300	2,52,68,400	5,62,56,000	3,09,87,600
97,60,000	4,24,99,200	15,96,19,200	11,71,20,000
98,15,100	4,63,62,000	16,41,43,200	11,77,81,200
1,27,01,000	11,30,07,600	26,54,19,600	15,24,12,000
1,04,59,100	4,14,81,600	16,69,90,800	12,55,09,200
85,51,400	7,50,39,600	17,76,56,400	10,26,16,800
99,37,900	3,66,72,000	15,59,26,800	11,92,54,000
27,82,500	3,72,66,000	7,06,56,000	3,33,90,000
20,14,50,409	138,47,26,692	380,21,31,600	241,74,04,908

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ ಟೋಟಲ್ ಪ್ರಾಹಿಬಿಷನ್ ಮಾಡುವುದಕ್ಕೆ ಸರ್ಕಾರ ಇರುವ ತೊಂದರೆ ಏನು ? ಏತಕ್ಕೆ ಮಾತಬಾರದು ?

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ಪ್ರಪಂಚದಲ್ಲಿ ಎಲ್ಲರೂ ಟ್ರೈ ಮಾಡಿ ಸಾಕಾಗಿ ಪುನಃ ವಾಪಸ್ ಅದೇ ಜಾಗಕ್ಕೆ ಬಂದಿದ್ದಾರೆ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ ಎಕ್ಸ್ಸೈಜ್ ರೆವಿನ್ಯೂ ೨೪೧ ಕೋಟಿ ರೂಪಾಯಿಗಳು ಇನ್‌ಕ್ರೀಜ್ ಆಗಿದೆ ಎಂದು ಹೇಳಿದ್ದಾರೆ. ಇಷ್ಟು ಇನ್‌ಕ್ರೀಜ್ ಆಗಲು ಕಾರಣವೇನು ?

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ಬರೀ ೨೪೧ ಕೋಟಿ ರೂಪಾಯಿಗಳು ಅಲ್ಲ. Rs. 243 crores by direct receipts from Excise Auction. On the increased sale, we get excise duty on that sale, that is about Rs. 102 crores. I am glad to inform the House that we get Rs. 307 crores more, over and above what we have got last year, only on arrack alone. The reason is, we have stopped seconds.

ಶ್ರೀ ಎಂ. ವಿ. ವೆಂಕಟಪ್ಪ.—ಪುನಃ ಇದರಲ್ಲಿ ಫಿಲ್‌ಪರೇಜ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ಇನ್ನು ಮೇಲೆ ಆದಕ್ಕೆ ಆಸ್ಪದಕೊಡುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ ತರಳುಬಾಳು ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಇತೀ ರಾಜ್ಯದಲ್ಲಿ ಪಾನ ನಿಷೇದ ಆಗಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಆ ರೀತಿ ಹೋರಾಟ ಮಾಡತಕ್ಕಂಥಾದ್ದು ಬಹಳ ಅಪರೂಪ. ಆದ್ದರಿಂದ ಆ ಒಂದು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಪಾನ ನಿಷೇದ ಮಾಡಲು ಸಾಧ್ಯವೇ ?

Sri M. V. Rajashakar Murthy.—I do not accept that suggestion

ಸಮಗ್ರ ಬಾಲವಿಕಾಸ ಯೋಜನೆಯನ್ನು ಮಾಗಡಿ ತಾಲ್ಲೂಕಿನಲ್ಲಿ ಅನುಷ್ಠಾನಕ್ಕೆ ತರುವ ಬಗ್ಗೆ

೧೩೭. ಶ್ರೀ ಹೆಚ್. ಎಂ. ರೇವಣ್ಣ. (ಮಾಗಡಿ).—ಮಾನ್ಯ ಕಾನೂನು ಯೋಜನೆ ವ್ಯವಹಾರ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಾಗಡಿ ತಾಲ್ಲೂಕಿನಲ್ಲಿ ಸಮಗ್ರ ಬಾಲವಿಕಾಸ ಯೋಜನೆಯು ಅನುಷ್ಠಾನದಲ್ಲಿಯೇ ;

ಆ) ಇಲ್ಲದಿದ್ದರೆ, ಕಾರಣವೇನು ;

ಇ) ಈ ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ. ?

ಶ್ರೀ ಎಂ. ವೀರಪ್ಪ ಮೊಯ್ಲಿ ಕಾನೂನು, ಸಂಸದೀಯ ವ್ಯವಹಾರ, ಮತ್ತು ಪ್ರವಾಸೋದ್ಯಮ ಸಚಿವರು ಸಮಾಜ ಕಲ್ಯಾಣ ಸಚಿವರ ಪರವಾಗಿ.—

ಅ) ಇಲ್ಲ

ಆ) ಭಾರತ ಸರ್ಕಾರವು ಅಧ್ಯತೆಯ ಮೇರೆಗೆ ಪರಿಶಿಷ್ಟ ಪಂಗಡ, ಜನಸಾಂದ್ರತೆ ಇರುವ ಪ್ರದೇಶ, ಬರಪೀಡಿತ ಪ್ರದೇಶ ಹಾಗೂ ಹಿಂದುಳಿದ ತಾಲ್ಲೂಕುಗಳಿಗೆ ಸಮಗ್ರ ಬಾಲವಿಕಾಸ ಯೋಜನೆಯನ್ನು ಮಂಜೂರು ಮಾಡುತ್ತದೆ. ಮಾಗಡಿ ತಾಲ್ಲೂಕಿಗೆ ಮಂಜೂರು ಮಾಡಿಲ್ಲವಾದ್ದರಿಂದ ಸಮಗ್ರ ಬಾಲವಿಕಾಸ ಯೋಜನೆಯನ್ನು ಪ್ರಾರಂಭಿಸಿಲ್ಲ.

ಇ) ಕೇಂದ್ರ ಸರ್ಕಾರವು ಈ ಯೋಜನೆಯನ್ನು ಮಂಜೂರು ಮಾಡಿದ ನಂತರ ಅನುಷ್ಠಾನಗೊಳಿಸಲಾಗುತ್ತದೆ.

ಶ್ರೀ ಹೆಚ್. ಎಂ. ರೇವಣ್ಣ —ಮಾನ್ಯ ಅಧ್ಯಕ್ಷರೇ, ನನ್ನ ಎರಡನೆಯ ಪ್ರಶ್ನೆಗೆ, ಭಾರತ ಸರ್ಕಾರವು ಅಧ್ಯತೆ ಮೇರೆಗೆ ಪ್ರೋಗ್ರಾಮ್‌ಗಳನ್ನು ಆಯ್ಕೆ ಮಾಡಲಾಗುತ್ತದೆಂದು ಹೇಳಿದ್ದಾರೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರವೂ ಕೂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆಯೇ ? ಹಾಗಿದ್ದರೆ, ಕೇಂದ್ರ ಸರ್ಕಾರವು ನಮ್ಮ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು ಆಯ್ಕೆ ಮಾಡಿದೆ ? ರಾಜ್ಯ ಸರ್ಕಾರವು ಎಷ್ಟು ತಾಲ್ಲೂಕುಗಳನ್ನು ಆಯ್ಕೆಮಾಡಿದೆ.